ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ

ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ.ಸಿ.613/2023**

ಪಿರ್ಯಾದುದಾರರು : ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

ವಿರುದ್ಧ

ಆರೋಪಿಗಳು :**1.** ಸುರೇಶ ಬಿನ್ ಲೇ. ತಮ್ಮೇಗೌಡ,
ವಯಸ್ಸು 43 ವರ್ಷ,

**2.** ಚಂದ್ರು ಎನ್.ಟಿ ಬಿನ್ ಲೇ.ತಮ್ಮೇಗೌಡ,
ವಯಸ್ಸು 39 ವರ್ಷ,

**3.** ಶಶಿಧರ ಬಿನ್ ಲೇ.ಸ್ವಾಮಿ,
ವಯಸ್ಸು 26 ವರ್ಷ,

**4.** ಹರೀಶ ಬಿನ್ ಲೇ.ಸ್ವಾಮಿ,
ವಯಸ್ಸು 23 ವರ್ಷ,

**5.** ಶಿವಣ್ಣ ಬಿನ್ ಲೇ.ತಮ್ಮೇಗೌಡ,
ವಯಸ್ಸು 50 ವರ್ಷ,

**6.** ಜಯಣ್ಣ ಬಿನ್ ಲೇ.ತಮ್ಮೇಗೌಡ,
ವಯಸ್ಸು 45 ವರ್ಷ,

ಆರೋಪಿಗಳ ವಾಸಃ
ನಿಲಂಗಾಲ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

<u>ದೋಷಾರೋಪಣೆ</u>

ಶ್ರೀ ಯೋಗೇಶ.ಎಂ.ಆರ್, ಬಿ.ಎ.,ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸಿದ್ದೇನೆಃ-

ಮೊದಲನೇಯದಾಗಿ, ದಿನಾಂಕ 20.02.2023 ರಂದು ಸಂಜೆ 5.00 ಗಂಟೆಯ ಸಮಯದಲ್ಲಿ, ಪಿರಿಯಾಪಟ್ಟಣ ತಾಲ್ಲೂಕು ನಿಲಂಗಾಲ ಗ್ರಾಮದ 1 ನೇ ಆರೋಪಿಯ ಮನೆಯ ಪಕ್ಕದಲ್ಲಿ ಹಾದು ಹೋಗಿರುವ ಕಚ್ಚಾ ರಸ್ತೆಯಲ್ಲಿ, ಚಾಸಾ.4 ಕಾಂತರಾಜು ರವರು ಟ್ರಾಕ್ಟರ್ ಅನ್ನು ಸದರಿ ರಸ್ತೆಯಲ್ಲಿ ಓಡಿಸಿಕೊಂಡು ಹೋಗುತ್ತಿದ್ದಾಗ, ಅಲ್ಲಿಗೆ 1 ರಿಂದ 6 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ನಿಮ್ಮ ಕೈಗಳಲ್ಲಿ ದೊಣ್ಣೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.144 ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 6 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ನಿಮ್ಮ ಕೈಗಳಲ್ಲಿ ದೊಣ್ಣೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಮತ್ತು ಗಲಾಟೆಯನ್ನು ಉಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.148 ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 6 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ.4 ಕಾಂತರಾಜು ರವರನ್ನು ಮುಂದಕ್ಕೆ ಹೋಗದಂತೆ ಅವರ ಟ್ರಾಕ್ಟರನ್ನು ತಡೆದು, ಅವರಿಗೆ ಅಕ್ರಮ ತಡೆವುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.341

ಸಹವಾಚಕ 149ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 6ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ , ನಿಮ್ಮ ಪೈಕಿ 2ನೇ ಆರೋಪಿಯಾದ ನೀವು ಚಾಸಾ.2 ವೇದಾವತಿ ರವರ ಮಾಂಗಲ್ಯ ಸರ ಕಿತ್ತು ಅಲ್ಲೆ ಬಿಸಾಡಿ, ನಂತರ 3 ರಿಂದ 7ನೇ ಆರೋಪಿಗಳಾದ ನೀವು ನಿಮ್ಮ ಕೈಗಳಿಂದ ಚಾಸಾ.4 ಕಾಂತರಾಜು ಮತ್ತು ಚಾಸಾ.5 ಲೋಕೇಶ ರವರ ಮೈಕೈಗೆ ಹೊಡೆದಿರುತ್ತೀರಿ ಹಾಗೂ 3ನೇ ಅರೋಪಿಯಾದ ನೀವು ನಿಮ್ಮ ಕೈಗಳಿಂದ ಚಾಸಾ.2 ವೇದಾವತಿ ರವರ ಬಲ ಕೈ ಹಾಗೂ ಸೊಂಟದ ಬಳಿ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.323 ಸಹವಾಚಕ 149 ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 6ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 1ನೇ ಆರೋಪಿಯಾದ ನೀವು ಚಾಸಾ.3 ರವಿ ರವರಿಗೆ ಅವಮಾನ ಪಡಿಸುವ ಉದ್ದೇಶದಿಂದ ಅವರಿಗೆ ಚಪ್ಪಲಿಯಿಂದ ಹೊಡೆದಿರುತ್ತೀರಿ, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.355 ಸಹವಾಚಕ 149 ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 6ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 2ನೇ ಆರೋಪಿಯಾದ ನೀವು ಒಂದು ರೀಪರ್ ದೊಣ್ಣೆಯಿಂದ ಚಾಸಾ.3 ರವರ ತಲೆಯ ಮುಂಭಾಗಕ್ಕೆ ಹೊಡೆದಿರುತ್ತೀರಿ ಹಾಗೂ 3ನೇ ಮತ್ತು 4ನೇ ಆರೋಪಿಗಳಾದ ನೀವು ಒಂದು ಕಲ್ಲಿನಿಂದ ಚಾಸಾ.1 ಪುಟ್ಟರಾಜು ರವರ ಬಲ ಕಾಲಿನ ತೊಡೆಯ ಬಳಿ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದು, ಆ ಮೂಲಕ

ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.324 ಸಹವಾಚಕ 149 ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 6 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 1 ನೇ ಮತ್ತು 2 ನೇ ಆರೋಪಿಯಾದ ನೀವು, ಉಳಿದ ಆರೋಪಿಗಳಿಗೆ ಮೇಲ್ಕಂಡ ಕೃತ್ಯವನ್ನು ಎಸಗಲು ಮತ್ತು ಗಲಾಟೆಯನ್ನು ನಡೆಯಲು ಕುಮ್ಮಕ್ಕು ನೀಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.114 ಸಹವಾಚಕ 149 ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿದ್ದೇನೆ.

ದಿನಾಂಕ: **(ಯೋಗೇಶ.ಎಂ.ಆರ್.)**
ಪಿರಿಯಾಪಟ್ಟಣ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ.,
ಪಿರಿಯಾಪಟ್ಟಣ.